ESI.A.No.5/2019
AW–2

ದಿನಾಂಕಃ 28–01–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ– ಎದುರುದಾರರ ಪರವಾಗಿಃ ಶ್ರೀ. SWK ವಕೀಲರಿಂದ

ನಾನು 12 ವರ್ಷಗಳಿಂದ ಅರ್ಜಿದಾರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ. 1–5–2016 ರಿಂದ 31–12–2016 ರವರೆಗೆ ಇ ಎಸ್ ಐ ವಂತಿಗೆ ಪಾವತಿ ಮಾಡಿಲ್ಲ ಎಂದು ನಮಗೆ ನೋಟೀಸ್ 31–10–2017 ರಲ್ಲಿ ಬಂತು ಎಂದರೆ ನಿಜ. ಆ ನೋಟೀಸಿನಲ್ಲಿ 13 ಜನ ಕಾರ್ಮಿಕರ ಬಗ್ಗೆ ಒಟ್ಟು ರೂ.55,770–00 ಗಳನ್ನು ಪಾವತಿಸಬೇಕೆಂದು ತಿಳಿಸಲಾಗಿತ್ತು ಎಂದರೆ ನಿಜ. ದಿಃ17–11–2017 ರಂದು ನನ್ನನ್ನು ಪರ್ಸನಲ್ ಹೀರಿಂಗ್ ಗೆ ಕರೆದರು ಎಂದರೆ ನಿಜ. ಆ ಪರ್ಸನಲ್ ಹೀರಿಂಗ್ ಸಮಯದಲ್ಲಿ ನನಗೆ ಲೆಡ್ಜರ್, ಕ್ಯಾಷ್ ಬುಕ್, ಅಕೌಂಟ್ ಬುಕ್, ಬಿಲ್ಸ್ ಮತ್ತು ಸ್ಟೇಟ್ಮೆಂಟ್ ಆಫ್ ಕಾಂಟ್ರಿಬ್ಯೂಷನ್ ಹಾಜರುಪಡಿಸಲು ತಿಳಿಸಲಾಗಿತ್ತು ಎಂದರೆ ನಿಜ. ನಮ್ಮ ಶಾಲೆಯ ಕಮಿಟಿಯವರು ಮಾತನಾಡಿಕೊಂಡು ಯಾರನ್ನು ಪರ್ಸನಲ್ ಹೀರಿಂಗ್ಗೆ ಕಳುಹಿಸಬೇಕೆಂದು ತೀರ್ಮಾನಿಸಬೇಕಾಗಿದ್ದರಿಂದ ಪರ್ಸನಲ್ ಹೀರಿಂಗ್ಗೆ ನಾವು ಹಾಜರಾಗಿರಲಿಲ್ಲ. ಆನಂತರ 5–12–2017 ಕ್ಕೆ ನನಗೆ ಇನ್ನೊಂದು ಪರ್ಸನಲ್ ಹೀರಿಂಗ್ಗೆ ಕರೆದರು ಎಂದರೆ ನಿಜ. ಆ ದಿನವೂ ನಮ್ಮ ಸಂಸ್ಥೆಯಿಂದ ಯಾರೂ ಹಾಜರಾಗಲಿಲ್ಲ ಎಂಬುದು ನಿಜ. ನಮ್ಮ ಗೈರು ಹಾಜರಿಯಿಂದಾಗಿ ಹಾಗೂ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೇ ಇರುವುದರಿಂದ ರೂ.55,770–00 ಗಳನ್ನು ಪಾವತಿಸಬೇಕೆಂದು ಆದೇಶವಾಯಿತು ಎಂದರೆ ನಿಜ. ಸದರಿ ಆದೇಶದ ವಿರುದ್ಧ ನಮ್ಮ ಸಂಸ್ಥೆ ಮೇಲ್ಮನವಿ ಸಲ್ಲಿಸಿಲ್ಲ ಎಂಬುದು ನಿಜ. ಇ ಎಸ್ ಐ ಕೋಡ್ ಪಡೆಯಬೇಕಾದರೆ ಪ್ರತಿ ತಿಂಗಳು ವಂತಿಗೆಯನ್ನು ಪಾವತಿಸಬೇಕು ಎಂಬ ನಿಯಮದ ಅರಿವು ನನಗೆ ಇತ್ತು. ನಾನು ನ್ಯಾಯಾಲಯದ ಮುಂದೆ ಕ್ಯಾಷ್ ಬುಕ್ , ಬಿಲ್ಸ್ , ವೋಚರ್ಸ , ಲೆಡ್ಜರ್ಸ ಹಾಗೂ ಬುಕ್ಸ್ ಆಫ್ ಅಕೌಂಟನ್ನು ಹಾಜರು ಮಾಡಿಲ್ಲ ಎಂದರೆ ನಿಜ. ನಾನು ಹಾಜರು ಮಾಡಿದ ದಾಖಲಾತಿಗಳನ್ನು ನಾನೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಕಾನೂನುಬದ್ಧವಾಗಿ ಪಾವತಿ ಮಾಡುವುದನ್ನು ತಪ್ಪಿಸುವ ಉದ್ದೇಶದಿಂದ ಈ ಸುಳ್ಳು ಅರ್ಜಿಯನ್ನು ನೀಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.